ನಿರ್ಮಿಸಿ ಅದರ ಮೇಲೆ ಪ್ಲಾಸ್ಟಿಕ್ ಹಾಳೆಗಳನ್ನು ಹಾಸಲಾಗಿತ್ತು. ಮಳೆಯ ನೀರು ಸರಾಗವಾಗಿ ಹರಿಯಲಾಗದೆ ಪ್ಲಾಸ್ಟಿಕ್ ಮೇಲೆ ನಿಂತು ಗರ್ಭಿಣಿಯ ಹೊಟ್ಟೆಯಾಕಾರದಲ್ಲಿ ಉಬ್ಬಿ ಹೋಗಿತ್ತು. ಯಾವ ಕ್ಷಣದಲ್ಲಾದರೂ ಮಗುಚಿ ಬಿದ್ದರೆ ಗತಿಯೇನು? ಎಂಬ ಚಿಂತೆ ಹೆಚ್ಚಿತು. ನಮ್ಮ ಕ್ಯಾಮೆರಾ ಹೊತ್ತ ಟ್ರೈಪ್ಯಾಡುಗಳ ಕೆಳಗೆ ಕೂಡ ನೀರು ನುಸುಳಿ ಬರುತ್ತಲೇ ಇತ್ತು. ತೀರಾ ಕನಿಷ್ಠ ಮಟ್ಟದ ಆ ಕಳಪೆ ತಾತ್ಕಾಲಿಕ ಶೆಡ್ಡಿನ ಮೇಲೆ ಯಾವ ನಂಬಿಕೆಗಳನ್ನೂ ಇಟ್ಟುಕೊಳ್ಳುವಂತಿರಲಿಲ್ಲ. ಇದೊಂದು ಅಪಾಯದ ಸ್ಥಿತಿ. ಒಂದೊಮ್ಮೆ ಭಳ್ಳನೆ ನೀರು ಕ್ಯಾಮೆರಾಗಳ ಮೇಲೆ ಸುರಿದರೆ ನಮ್ಮಖೇಲ್ ಖತಂ ಆದಂತೆ. ಆಗಾಗ ಎದ್ದು ನೀರಿನ ಹೊಟ್ಟೆಯನ್ನು ಮೆಲ್ಲಗೆ ಎತ್ತಿ ಪ್ಲಾಸ್ಟಿಕ್‌ನ ಮತ್ತೊಂದು ಬದಿಯಿಂದ ನೀರನ್ನು ನಿಧಾನವಾಗಿ ಇಳಿದು ಹೋಗುವಂತೆ ಮಾಡುತ್ತಿದ್ದೆವು. ಅಸಲಿಗೆ ಇಂತಹ ಯಾವ ಓಡಾಡುವ ಚಟುವಟಿಕೆಗಳನ್ನೂ ಮರೆ ಫೋಟೊಗ್ರಫಿಯಲ್ಲಿ ಮಾಡಲೇಬಾರದು. ಹಕ್ಕಿ ಎಲ್ಲಾ ದಿಕ್ಕುಗಳಲ್ಲೂ ಓಡಾಡುತ್ತಾ ನಮ್ಮ ಚಲನೆಗಳನ್ನು ತೀಕ್ಷ್ಣವಾಗಿ ಗಮನಿಸುತ್ತಿರುತ್ತದೆ. ಹೋ ಇಲ್ಲಿ ಅಪಾಯವಿದೆ ಎಂದು ಅರಿವಾದರೆ ಅದು ಕಡ್ಡಿಯ ಮೇಲೆ ಬಾರದೆಯೂ ಇರಬಹುದು. ಈ ಎಚ್ಚರಿಕೆ ನಮಗಿರಲೇಬೇಕು. ಮಾತೂ ಆಡದೆ, ಕೊಂಚವೂ ಅಲ್ಲಾಡದೆ, ಸತ್ತ ಹೆಣಗಳಂತೆ ಸೆಟೆದು ಗಂಟೆಗಟ್ಟಲೆ ಕೂರುವ ಹಟಯೋಗ ಬಿಟ್ಟರೆ ನಮಗೆ ಇನ್ನೂ ಯಾವ ಮಾರ್ಗವೂ ಇಲ್ಲ.

ಈಗ ಹಕ್ಕಿ ಎಲ್ಲೋ ಬಂದು ಕೂತು ಕೂಗಿದ ಶಬ್ದ ಸಣ್ಣಗೆ ಕೇಳಿಸಿತು. ಇದನ್ನು ಮೊದಲು ಗ್ರಹಿಸಿದ ವಿನಯ್ "ಸರ್ ರೆಡಿ ಇರಿ. ಈಗ ಹಕ್ಕಿ ಬರುತ್ತೆ" ಎಂದು ಪಿಸುಗುಟ್ಟಿದ. ಉಸಿರು ಬಿಗಿಹಿಡಿದು ಸಿದ್ಧರಾದೆವು. ಈಗ ಕಡ್ಡಿ ಫೋಕಸ್ ಆಗಿ ರೆಡಿಯಾಗಿದೆ. ಹಕ್ಕಿ ಎಲ್ಲಿಂದ ಕೂಗುತ್ತಿದೆ ಎಂದು ಎಲ್ಲರೂ ಗಮನಿಸುತ್ತೇವೆ. ಈ ಕ್ಷಣ ನಮಗೆ ತುಂಬಾ ಮುಖ್ಯ. ಅದು ಹಾರಿ ಬರುವ ದಿಕ್ಕು ಮೊದಲೇ ಗೊತ್ತಾದರೆ ಒಳ್ಳೆಯ ಪಟ ತೆಗೆಯಬಹುದು. ಯಾರು ಮೊದಲು ಹಕ್ಕಿಯ ಇರುವಿಕೆ ಜಾಗ ಗುರುತಿಸುತ್ತಾರೋ ಅವರು ಕೊಂಚವೂ ಶಬ್ದ ಮಾಡದೆ ಅಕ್ಕಪಕ್ಕದವರ ಕೈ ಅದುಮಿ ಕಣ್ಣಸನ್ನೆಯಲ್ಲೇ ಹಕ್ಕಿ ಕೂತ ದಿಕ್ಕನ್ನು ನಿರ್ದೇಶಿಸಬೇಕು. ಹಕ್ಕಿಯ ಕೂಗಿನ ಜಾಡು ಹಿಡಿದು ಹಸಿರೆಲೆಗಳ ಮಧ್ಯೆ ಕೂತ ಅದರ ನೆಲೆ ಪತ್ತೆ ಹಚ್ಚುವುದು ಸಲೀಸಲ್ಲ. ಇದಕ್ಕೆಲ್ಲಾ ಅನುಭವ ಮತ್ತು ಸೂಕ್ಷ್ಮ ಜ್ಞಾನ ಬಳಸಬೇಕು. ನಮ್ಮ ಟೀಮಿನಲ್ಲಿರುವ ನ್ಯಾಚುರಲಿಸ್ಟ್ ವಿನಯ ಇದರಲ್ಲಿ ಎತ್ತಿದ ಕೈ. ಈ ಕಾರಣಕ್ಕೆ ನಾನವನನ್ನು ಹೊರ ಸಂಚಾರವಿದ್ದಾಗ ಬಿಟ್ಟು ಹೋಗುವುದಿಲ್ಲ. ನಮಗೆಲ್ಲಾ ಇವನು ದಾರಿದೀಪ ಇದ್ದಂತೆ. ಶ್ರೀಕಾಂತ್ ಮತ್ತು ಡಾ. ಪ್ರಭಾಕರ್ ಈ ವಿಷಯದಲ್ಲಿ ನಿಪುಣರು. ಆದೇನೋ ನನ್ನ ಪುಣ್ಯ. ಈ ಸಲ ದೂರದ ಟೊಂಗೆಯ ಮೇಲಿದ್ದ ಹಕ್ಕಿ ನನಗೆ ಮೊದಲು ಕಂಡಿತು. ಅದು ನಮ್ಮತ್ತ ಹಾರಿದ ಕೂಡಲೇ ಪಿಸುದನಿಯಲ್ಲಿ 'ಎಸ್' ಎನ್ನುತ್ತೇನೆ ಎಂದು ಎಲ್ಲರಿಗೂ ಸೂಚನೆ ಕೊಟ್ಟೆ. ಒಂದು.. ಎರಡು.. ಮೂರು ಓಹ್ ಹಕ್ಕಿ ಹಾರೇ ಬಿಟ್ಟಿತು. ಓಹೋ! ಬಾಯಲ್ಲಿ ಹಾವುರಾಣಿ ಇದೆ. ಈಗ ಹಸಿರು ಕಡ್ಡಿಗೆ ನಿಜಕ್ಕೂ ಜೀವ ಬಂದೇ ಬಿಟ್ಟಿತು. ಎಲ್ಲರ ಕ್ಯಾಮೆರಾ 'ಲಬಲಬ' ಎಂದು ಬಡಿದುಕೊಂಡವು. ಹಕ್ಕಿ ಒಂದು ನಿಮಿಷ ಕೂತು ಅತ್ತಿತ್ತ ನೋಡಿ ಫರ‍್ರೆಂದು ಬಿಲದ ಕಡೆ ಹಾರಿತು. ಕೆಲವೇ ಕ್ಷಣಗಳಲ್ಲಿ ನಡೆದ ಹಕ್ಕಿಯ ಎಲ್ಲಾ ಹಾವಭಾವಗಳು ನಮ್ಮ ಕ್ಯಾಮೆರಾದಲ್ಲಿ ದಾಖಲಾದವು. ತಕ್ಷಣ ತಿರುಗಿ ಅರುಣ್ ಮುಖವನ್ನು ನೋಡಿದೆ. ಸಂತೋಷದಿಂದ ಅವರ ಕಣ್ಣುಗಳು ಮಿನುಗುತ್ತಿದ್ದವು. 'ವ್ವಾವ್ ಸಾರ್ ಜೀವನ ಸಾರ್ಥಕ' ಎಂದು ಕೈಬೀಸಿ ಹೈಫೈ ಕೊಟ್ಟರು.

'ನೋಡಿ ಇಲ್ಲಿ ನಾನೂ ಚಿತ್ರ ತೆಗೆದೇ ಬಿಟ್ಟೆ. ಎಂಥ ಥ್ರಿಲ್ಲಿಂಗ್ ಅನುಭವ ಸಾರ್ ಇದು. ಯಾರೋ ತೆಗೆದ ಚಿತ್ರ ನೋಡಿ ವ್ವಾವ್, ಸೂಪರ್ ಎಂದು ಕಾಮೆಂಟ್ ಹೊಡೀಯೋದು ಎಷ್ಟು ಸುಲಭ ಅಲ್ವಾ! ಆದರೆ, ಇವತ್ತು ಕಾದೂ, ಕಾತರಿಸಿ ಪಡೆದ ಅನುಭವ ಇದೆಯಲ್ಲ ಅದು ನೆಕ್ಸ್ಟ್ ಲೆವೆಲ್. ಮನಸ್ಸಿಗೆ ಮುದ ಕೊಡಲು ಇಷ್ಟು ಸಣ್ಣ ವಿಷಯವೂ ಸಾಕಲ್ಲವೇ ಸರ್. ನೀವು ಆಸಕ್ತಿ ಹುಟ್ಟಿಸದೇ ಹೋಗಿದ್ದರೆ ಈ ಗ್ರೇಟ್ ಫೀಲಿಂಗ್ ಸಿಗ್ತಾನೆ ಇರ್ಲಿಲ್ಲ. ಪರಿಶೀಲಿಸಿ ನೋಡೋ ಕಣ್ಣು ಆನಂದಿಸೋ ಮನಸ್ಸು ಇದ್ರೆ ಈ ಪ್ರಕೃತೀಲಿ ನೋಡುವ ಇನ್ನು ಅದೆಷ್ಟು ಸೋಜಿಗಗಳು ಬಾಕಿ ಇದ್ದಾವೋ! ಎಂದು ನೆನೆಸಿಕೊಂಡೇ ಪುಳಕವಾಗ್ತಿದೆ ಸರ್. ಇಷ್ಟು ತಾಪತ್ರಯ ತೊಗೊಂಡು ನೀವೆಲ್ಲಾ ಯಾಕೆ ಕಾಡಿನ ಕಡೆ ಓಡೋಗ್ತೀರಿ ಅನ್ನೋ ಸೀಕ್ರೆಟ್ ಈಗ